**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 1385/2014**

| | | |
|---|---|---|
| ಹೆಸರು | ಪ್ರಸನ್ನ ಕುಮಾರ ಸಿ.ಎಲ್. | ಪ್ರಾ.ಸಾ.5 |
| ತಂದೆ ಹೆಸರು | ಲೇಟ್ ಲಕ್ಷ್ಮಯ್ಯ | ಚಾ.ಸಾ.5 |
| ವಯಸ್ಸು | 45 ವರ್ಷ | |
| ಕೆಲಸ | ಉಪನ್ಯಾಸಕ | ಸಾ.ಪ್ರ.ವ.ಬೋ |
| ಹಾಲಿ ವಾಸ | ಬೆಂಗಳೂರು | ದಿ: 28.07.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಸಾಕ್ಷಿಗೆ ಶವ ತನಿಖಾ ವರದಿಯನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.4[ಬಿ] ಎಂದು ಗುರ್ತಿಸಲಾಯಿತು. ದಿ:14.02.2014ರಂದು ನನ್ನ ತಂದೆ ನಮ್ಮ ಊರಿನಿಂದ ತಾವರೆಕೆರೆಗೆ ಹೋಗುವಾಗ ಬೆಂಗಳೂರು ಕಡೆಯಿಂದ ಬರುತ್ತಿದ್ದ ವಾಹನ ಅತಿವೇಗವಾಗಿ ಮತ್ತು ಅಜಾಗರೂಕತಯಿಂದ ಬಂದು ನನ್ನ ತಂದೆ ವಾಹನಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿದ್ದು, ನಂತರ ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಹೆಚ್ಚಿನ ಚಿಕಿತ್ಸೆಗೆ ನಿಮ್ಹಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯೆ ಮೃತಹೊಂದಿರುತ್ತಾರೆ. ನಂತರ ಅವರನ್ನು ಎಂ.ವಿ.ಜೆ. ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಅಲ್ಲಿ ಶವ ತನಿಖೆ ವರದಿಯನ್ನು ಪೊಲೀಸರು ತಯಾರಿಸಿದ್ದು, ಆಗ ನಾನು ಸ್ಥಳದಲ್ಲಿ ಹಾಜರಿದ್ದು, ನಿ.ಪಿ.4ಕ್ಕೆ ಸಹಿ ಮಾಡಿರುತ್ತೇನೆ. ಮೃತ ಲಕ್ಷ್ಮಯ್ಯರವರಿಗೆ ಕಾಲು ಮತ್ತು ತಲೆಗೆ ಗಾಯವಾಗಿತ್ತು. ಸದರಿ ಪಂಚನಾಮೆಯ ಸಮಯದಲ್ಲಿ ನನ್ನ ಜೊತೆ ಚಾ.ಸಾ.4 ರಾಮಸ್ವಾಮಿ ಮತ್ತು ಚಾ.ಸಾ.6 ಮುನಿಸ್ವಾಮಿ ಇದ್ದರು. ನಿ.ಪಿ.4ನ್ನು ಮಧ್ಯಾಹ್ನ ಸುಮಾರು 12 ಗಂಟೆಯ ನಂತರ ಸುಮಾರು ಎರಡೂವರೆ ಗಂಟೆಗಳ ಕಾಲ ಮಾಡಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರರಿಂದ : –**

ಸದರಿ ಅಪಘಾತವಾದಾಗ ನಾನು ಬೆಂಗಳೂರಿನಲ್ಲಿದ್ದೆ. ಸದರಿ ಅಪಘಾತದ ಬಗ್ಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ, ನಾನು ಕೇಳಿ ತಿಳಿದುಕೊಂಡಿದ್ದೇನೆ. ನನ್ನ ತಂದೆಗೆ ವಯಸ್ಸಾಗಿದ್ದ ಕಾರಣ ಅವರ ಅಜಾಗರೂಕತೆಯಿಂದ ವಾಹನ ಚಲಾಯಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ವಿಮೆ ಪರಿಹಾರ ಪಡೆಯಲೆಂದು ಚಾ.ಸಾ.1ರವರಿಂದ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. 1385/2014**

| | | |
|---|---|---|
| ಹೆಸರು | ರಾಮಸ್ವಾಮಿ | ಪ್ರಾ.ಸಾ.4 |
| ತಂದೆ ಹೆಸರು | ತಿಮ್ಮರಾಯಪ್ಪ | ಚಾ.ಸಾ.4 |
| ವಯಸ್ಸು | 56 ವರ್ಷ | |
| ಕೆಲಸ | ಶಿಕ್ಷಕರು | ಸಾ.ಪ್ರ.ವ.ಬೋ |
| ಹಾಲಿ ವಾಸ | ಚಿಕ್ಕನಹಳ್ಳಿ | ದಿ: 28.07.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಸಾಕ್ಷಿಗೆ ಶವ ತನಿಖಾ ವರದಿಯನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸದರಿ ದಾಖಲೆಯನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4[ಎ] ಎಂದು ಗುರ್ತಿಸಲಾಯಿತು. 2014ರಲ್ಲಿ ನಮ್ಮ ಚಿಕ್ಕಪ್ಪ ಮೃತ ಲಕ್ಷ್ಮಯ್ಯರವರು ಅಪಘಾತದಿಂದ ಮರಣಗೊಂಡಿದ್ದು, ಅವರ ಶವ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿಯವರ ಮೃತ ದೇಹ ಎಮ್.ವಿ.ಜೆ. ಆಸ್ಪತ್ರೆ, ಹೊಸಕೋಟೆಯಲ್ಲಿ ಇದ್ದು, ಅವರ ಮರಣೋತ್ತರ ಪರೀಕ್ಷೆ ಮಾಡುವ ಸಮಯದಲ್ಲಿ ನಾನು ಹಾಜರಿದ್ದೆ. ಮೃತ ಲಕ್ಷ್ಮಯ್ಯರವರಿಗೆ ಕಾಲು ಮತ್ತು ತಲೆಗೆ ಗಾಯವಾಗಿತ್ತು. ಸದರಿ ಪಂಚನಾಮೆಯ ಸಮಯದಲ್ಲಿ ನನ್ನ ಜೊತೆ ಚಾ.ಸಾ.5 ಪ್ರಸನ್ನ ಮತ್ತು ಚಾ.ಸಾ.6 ಮುನಿಸ್ವಾಮಿ ಇದ್ದರು.

**ಆರೋಪಿ ಪರ ವಕೀಲರಿಂದ: ಪಾಟಿ ಸವಾಲು: ಇಲ್ಲ.**

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. 1385/2014**

| | | |
|---|---|---|
| ಹೆಸರು | ಬಸವರಾಜು | ಪ್ರಾ.ಸಾ.3 |
| ತಂದೆ ಹೆಸರು | ಚಿಕ್ಕಯ್ಯಣ್ಣ | ಚಾ.ಸಾ.3 |
| ವಯಸ್ಸು | 59 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಯಲಚಹಳ್ಳಿ | ದಿ: 28.07.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಸಾಕ್ಷಿ ನಿ.ಪಿ.1 ಮಹಜರ್‌ನಲ್ಲಿ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸದರಿ ಸಹಿಯನ್ನು ನಿ.ಪಿ.1[ಸಿ] ಎಂದು ಗುರ್ತಿಸಲಾಯಿತು. ನಿ.ಪಿ.1 ಮಹಜರ್‌ಗೆ ಚಿಕ್ಕನಹಳ್ಳಿ ಗೇಟ್‌ನಲ್ಲಿ ಸುಮಾರು 4–5 ವರ್ಷಗಳ ಹಿಂದೆ ಲಕ್ಷ್ಮಯ್ಯರವರ ವಾಹನದ ಅಪಘಾತವಾಗಿದ್ದು, ಪೊಲೀಸರು ಬಂದು ಸಹಿ ಮಾಡು ಎಂದು ಹೇಳಿದ್ದರ ಮೇರೆಗೆ ಸಹಿ ಮಾಡಿರುತ್ತೇನೆ. ನಿ.ಪಿ.1ನ್ನು ತಯಾರಿಸುವಾಗ ಜನ ಇದ್ದರು. ಆದರೆ ನನ್ನ ಜೊತೆ ಯಾರೂ ಇರಲಿಲ್ಲ. ಸದರಿ ವಿಚಾರವಾಗಿ ನಾನು ಹೇಳಿಕೆ ನೀಡಿರುವುದಿಲ್ಲ. ಲಕ್ಷ್ಮಯ್ಯರವರಿಗೆ ಎಲ್ಲಿ ಗಾಯಗಳಾಗಿದ್ದವು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿರುತ್ತಾರೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು : ಮಾನ್ಯ ಎಪಿಪಿರವರಿಂದ : –**

ದಿ: 20.09.2014 ರಂದು ಸಂಜೆ 7.45 ಗಂಟೆ ಸಮಯಲ್ಲಿ ಅವರು ಕೆಲಸದ ನಿಮಿತ್ತ ಚಿಕ್ಕನಹಳ್ಳಿ ಗೇಟ್‌ಗೆ ಹೋಗಿದ್ದು, ಸದರಿ ಸ್ಥಳದಲ್ಲಿ ಕಾರು ಮತ್ತು ಮೃತ ಲಕ್ಷ್ಮಯ್ಯರವರು ತಮ್ಮ ದ್ವಿ ಚಕ್ರವಾಹನದಲ್ಲಿ ತಾವರೆಕೆರೆ ಕಡೆಗೆ ಬರುತ್ತಿದ್ದಾಗ ಕೋಲಾರದ ಕಡೆಯಿಂದ ಬರುತ್ತಿದ್ದ ಕಾರು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು ಸದರಿಯವರಿಗೆ ಅಪಘಾತಪಡಿಸಿರುತ್ತದೆ ಎಂದು ಹೇಳಿಕೆಯ ಭಾಗವನ್ನು ಓದಿ ಹೇಳಲಾಗಿ ಸದರಿ ಹೇಳಿಕೆಯನ್ನು ಸಾಕ್ಷಿಯು ಅಲ್ಲಗಳೆದುದರಿಂದ ಸದರಿ ಹೇಳಿಕೆಯನ್ನು ನಿ.ಪಿ.3 ಎಂದು ಗುರ್ತಿಸಲಾಯಿತು. ಆರೋಪಿಯ ಪರಿಚಯವಿಲ್ಲ. ಚಾ.ಸಾ.4ರವರ ಪರಿಚಯವಿದೆ. ಚಾ.ಸಾ.5ರವರ ಪರಿಚಯವಿರುವುದಿಲ್ಲ.

**ಆರೋಪಿ ಪರ ವಕೀಲರಿಂದ: ಪಾಟಿ ಸವಾಲು: ಇಲ್ಲ.**

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಸಿ.ಸಿ. 1385/2014**

| | | |
|---|---|---|
| ಹೆಸರು | ಮುನಿರಾಜು | ಪ್ರಾ.ಸಾ.2 |
| ತಂದೆ ಹೆಸರು | ಮುನಿಯಪ್ಪ | ಚಾ.ಸಾ.1 |
| ವಯಸ್ಸು | 58 ವರ್ಷ | |
| ಕೆಲಸ | ವ್ಯವಸಾಯ | ಸಾ.ಪ್ರ.ವ.ಬೋ |
| ಹಾಲಿ ವಾಸ | ಯಲಚಹಳ್ಳಿ | ದಿ: 28.07.2022 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದ: –**

ಸಾಕ್ಷಿಗೆ ದಿ: 15.02.2014ರ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿ ಅದರಲ್ಲಿರುವ ಅವರ ಸಹಿಯನ್ನು ಗುರ್ತಿಸಿದ್ದರಿಂದ ಅದನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2[ಎ] ಎಂದು ಗುರ್ತಿಸಲಾಯಿತು. 2014 ರಲ್ಲಿ ಸಂಜೆ ಸುಮಾರು 5.30–6.00 ಗಂಟೆಗೆ ಲಕ್ಷ್ಮಣರವರು ಚಿಕ್ಕನಹಳ್ಳಿಯಿಂದ ತಾವರೆಕೆರೆಗೆ ದ್ವಿ–ಚಕ್ರವಾಹನದಲ್ಲಿ ಹೋಗುತ್ತಿದ್ದಾಗ ಹೊಸಕೋಟೆ ಕಡೆಯಿಂದ ಬಂದ ಕಾರು ಸದರಿಯವರಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿರುತ್ತದೆ. ಆಗ ಲಕ್ಷ್ಮಣರವರು ವಾಹನದಿಂದ ಕೆಳಗೆ ಬಿದ್ದು, ಗಾಯಗಳಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಎಮ್.ವಿ.ಜೆ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತೇವೆ. ಅವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಮೃತ ಹೊಂದಿರುತ್ತಾರೆ. ಸದರಿ ಅಪಘಾತವು ಕಾರಿನ ಚಾಲಕನ ತಪ್ಪಿನಿಂದ ಆಗಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯು ಕಾರಿನ ಚಾಲಕನಾಗಿದ್ದು, ಆರೋಪಿಯ ತಪ್ಪಿನಿಂದ ಅಪಘಾತ ಆಗಿರುತ್ತದೆ.

ನಾನು ನಿ.ಪಿ.2ನ್ನು ಸಲ್ಲಿಸಿದ ನಂತರ ಪೊಲೀಸರು ಸಂಜೆ ಸುಮಾರು 6.30–7.00 ಗಂಟೆಗೆ ಅಪಘಾತ ನಡೆದ ಸ್ಥಳಕ್ಕೆ ಬಂದು ನಿ.ಪಿ.1ರಂತೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ಸಾಕ್ಷಿ ನಿ.ಪಿ.1 ಮಹಜರ್‌ನಲ್ಲಿ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದರಿಂದ ಸದರಿ ಸಹಿಯನ್ನು ನಿ.ಪಿ.1[ಬಿ] ಎಂದು ಗುರ್ತಿಸಲಾಯಿತು. ನಿ.ಪಿ.1 ಮಹಜರ್‌ಗೆ ನನ್ನನ್ನು ಹೊರತುಪಡಿಸಿ ಪೊಲೀಸರು, ಚಾ.ಸಾ.2 ಮತ್ತು 3ರವರು ಇದ್ದರು. ಪೊಲೀಸರು ನಿ.ಪಿ.1ನ್ನು ತಯಾರಿಸಿ ನಂತರ ಅಪಘಾತಕ್ಕೆ ಸಂಬಂಧಿಸಿದ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀಮತಿ.ಅನಿತ ವಕೀಲರಿಂದ : –**

ನಾನು ಮತ್ತು ಮೃತ ಲಕ್ಷ್ಮಯ್ಯ ಒಂದೇ ಊರಿನವರು ಎಂದರೆ ಸರಿ. ನಿ.ಪಿ.2ನ್ನು ಯಾವ ದಿನ ನೀಡಿರುತ್ತೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ನಿ.ಪಿ.2ನ್ನು ನಾನೇ ಬರೆದು ನೀಡಿರುತ್ತೇನೆ. ನಿ.ಪಿ.2ನ್ನು ನಮ್ಮ ಗೇಟ್‌ನಲ್ಲಿ ಬರೆದಿರುತ್ತೇನೆ. ನಿ.ಪಿ.2ನ್ನು ಅಪಘಾತವಾದ ಮರುದಿನ ಬೆಳಿಗ್ಗೆ ಸುಮಾರು 10.00 ಗಂಟೆಗೆ ಬರೆದಿರುತ್ತೇನೆ. ನಿ.ಪಿ.2ನ್ನು ಬರೆಯುವ ಸಮಯದಲ್ಲಿ ಚಾ.ಸಾ.2 ಮತ್ತು 3ರವರು ಇದ್ದರು. ನಾನು ಆರೋಪಿಯನ್ನು ಮೊದಲಬಾರಿಗೆ ಪೊಲೀಸ್ ಠಾಣೆಯಲ್ಲಿ ನೋಡಿರುತ್ತೇನೆ, ಆ ದಿನಾಂಕ ಗೊತ್ತಿಲ್ಲ.

ಚಿಕ್ಕನಹಳ್ಳಿ ಗೇಟ್ ಚತುಷ್ಪಥದ ಜಂಕ್ಷನ್ ಆಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಚತುಷ್ಪಥದ ಜಾಗದಲ್ಲಿ ಬ್ಯಾರಿಕೇಡ್‌ಗಳನ್ನು ಇಡಲಾಗಿರುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳ ಎನ್.ಎಚ್.75 ಎಂದರೆ ಸರಿ. ಸದರಿ ರಸ್ತೆಯಲ್ಲಿ 24 ಗಂಟೆಗಳೂ ಕೂಡ ವಾಹನಗಳು ಓಡಾಡುತ್ತಿರುತ್ತವೆ ಎಂದರೆ ಸರಿ. ಮೃತರಿಗೆ ಅಪಘಾತವಾದ ಸಮಯದಲ್ಲಿ ಸುಮಾರು 70 ವರ್ಷಗಳಾಗಿದ್ದವು. ಸದರಿಯವರ ಕಣ್ಣಿನ ದೃಷ್ಟಿ ಅಪಘಾತವಾದಾಗ ಸರಿಯಾಗಿತ್ತು. ಮೃತರು ಅಪಘಾತದ ಸಮಯದಲ್ಲಿ ಚಲಾಯಿಸುತ್ತಿದ್ದ ವಾಹನ ಯಾವ ವರ್ಷದ ಮಾದರಿ ವಾಹನವೆಂದು ನನಗೆ ಗೊತ್ತಿಲ್ಲ.

ನಾನು ನಿ.ಪಿ.2ರಲ್ಲಿ ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿ.ಪಿ.2ರ 2ನೇ ಮುಖಪುಟದಲ್ಲಿ ವಾಹನ ಸಂಖ್ಯೆಯನ್ನು 4ನ್ನು 2ನ್ನಾಗಿ ಸಂಖ್ಯೆ 2ನ್ನು 4ನ್ನಾಗಿ ತಿದ್ದಿ ಬರೆಯಲಾಗಿದೆ ಎಂದರೆ ಸರಿ. 2ನೇ ಮುಖಪುಟದಲ್ಲಿ ಸದರಿ ಸಂಖ್ಯೆಗಳನ್ನು ಕೊನೆಯಲ್ಲಿಯೂ ಕೂಡ ತಿದ್ದುಪಡೆ ಮಾಡಲಾಗಿದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಬ್ಯಾರಿಕೇಡ್‌ಗಳಿರುವುದರಿಂದ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2ರಲ್ಲಿ ಸದರಿ ಕಾರು ಬ್ಯಾರಿಕೇಡ್‌ಗಳನ್ನು ಹೊಡೆದುಕೊಂಡು ಚಲಿಸಿರುತ್ತದೆ ಎಂದು ನಮೂದಿಲ್ಲ ಎಂದರೆ ಸಾಕ್ಷಿ ಸದರಿ ಕಾರು ಆ ರೀತಿಯಾಗಿ ಬ್ಯಾರಿಕೇಡ್‌ಗಳನ್ನು ಹೊಡೆದುಕೊಂಡು ಹೋಗಿರಲಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಹಿಂದಿನ ವಾಹನ ಮುಂದಿನ ವಾಹನಕ್ಕೆ ಡಿಕ್ಕಿ ಹೊಡೆದಾಗ ಮುಂದೆ ಹೋಗುತ್ತಿರುವ ವಾಹನದ ಹಿಂದಿನ ಭಾಗ ಜಖಂಗೊಳ್ಳುತ್ತದೆ ಎಂದರೆ ಸರಿ. ನಿ.ಪಿ.2ರ ಪ್ರಕಾರ ಮೃತರ ವಾಹನದ ಮುಂದಿನ ಭಾಗ ಮಾತ್ರ ಜಖಂಗೊಂಡಿತ್ತು ಎಂದರೆ ಸರಿಯಲ್ಲ. ಚಲಿಸುತ್ತಿರುವ ವಾಹನಕ್ಕೆ ಹಿಂದೆ ಬರುತ್ತಿರುವ ವಾಹನ ಹಿಂದಿನಿಂದ ಅಥವಾ ಪಕ್ಕಕ್ಕೆ ಬಂದು ಡಿಕ್ಕಿ ಹೊಡೆದಾಗ ಮಾತ್ರ ವಾಹನೆದ ಮುಂದಿನ ಭಾಗ ಜಖಂಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನಿ.ಪಿ.1ರಲ್ಲಿ ಅಪಘಾತಗೊಂಡ ವಾಹನ ಹಿಂದೆ ಜಖಂಗೊಂಡ ಬಗ್ಗೆ ಬರೆಸಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನ ಮೃತರನ್ನು ಆಸ್ಪತ್ರೆಗೆ ಕರೆದುಕೊಂಡ ಹೋದ ಕಾರಣ ಅದೇ ದಿನ ದೂರು ನೀಡಿರುವುದಿಲ್ಲ. ಸದರಿಯವರನ್ನು ಬೆಂಗಳೂರಿನ ಯಾವ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಎಂದು ನೆನಪಿಲ್ಲ. ಅಪಘಾತವಾದ ರಾಷ್ಟ್ರೀಯ ಹೆದ್ದಾರಿಯ ಎಡಗಡೆ, ಉತ್ತರ ಭಾಗದಲ್ಲಿ ಚಿಕ್ಕನಹಳ್ಳಿ ಗೇಟ್ ಇದೆ ಎಂದರೆ ಸರಿ. ಸದರಿ ಸ್ಥಳದ ಬಳಿ ಸರ್ವಿಸ್ ರಸ್ತೆ ಇರುವುದಿಲ್ಲ. ಸದರಿ ಸ್ಥಳದಲ್ಲಿ ಸರ್ವಿಸ್ ರಸ್ತೆ ಇದ್ದು, ದಕ್ಷಿಣ ಭಾಗಕ್ಕೆ 30 ಅಡಿಗಳ 2 ಪಥದ ಎರಡು ರಸ್ತೆಗಳಿವೆ ಎಂದರೆ ಸರಿ. ಸದರಿ 2 ಪಥದ ನಂತರ ಡಿವೈಡರ್ ಇದ್ದು, ನಂತರ ಮತ್ತೆ 02 ಪಥದ ರಸ್ತೆಗಳಿವೆ ಎಂದರೆ ಸರಿ. ಅಪಘಾತವಾದ ಸ್ಥಳ ಸದರಿ ಡಿವೈಡರ್‌ನ ದಕ್ಷಿಣ ಭಾಗದ ರಸ್ತೆಯ ಮೇಲೆ ಬರುತ್ತದೆ ಎಂದರೆ ಸರಿ. ಚಿಕ್ಕನಹಳ್ಳಿ ಗೇಟ್‌ನಿಂದ ಘಟನಾ ಸ್ಥಳಕ್ಕೆ ಸುಮಾರು 60 ಅಡಿ ಅಂತರವಿದೆ ಎಂದರೆ ಸರಿ. ಮೃತ ಲಕ್ಷ್ಮಯ್ಯ ಚಿಕ್ಕನಹಳ್ಳಿ ಗೇಟ್‌ನಿಂದ ಎನ್.ಎಚ್.75 ರಸ್ತೆಗೆ ಏಕಾಏಕಿ ತಮ್ಮ ವಾಹನವನ್ನು ಚಲಾಯಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮೃತ ಲಕ್ಷ್ಮಯ್ಯರವರಿಗೆ ಚಾಲನಾ ಪರವಾನಿಗೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಷಯದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ನಾನು ಮಾಡಿಲ್ಲ. ಮೃತ ಲಕ್ಷ್ಮಯ್ಯರವರಿಗೆ ವಿಮೆ ಪರಿಹಾರ ಸಿಗಲೆಂದು ಮತ್ತು ಅವರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ನಡೆದ ಸ್ಥಳದ ಚೆಕ್ಕುಬಂದಿ ಪೂರ್ವಕ್ಕೆ ಕೋಲಾರ ರಸ್ತೆ, ಪಶ್ಚಿಮಕ್ಕೆ ಹೊಸಕೋಟೆ ರಸ್ತೆ, ಉತ್ತರಕ್ಕೆ ಚಿಕ್ಕನಹಳ್ಳಿ ಗೇಟ್, ದಕ್ಷಿಣಕ್ಕೆ ಮಾಲೂರು ರಸ್ತೆ ಇರುತ್ತದೆ. ನಿ.ಪಿ.2ನ್ನು ಠಾಣೆಯಲ್ಲಿ ತಯಾರಿಸಿ ನಾನು, ಚಾ.ಸಾ.2 ಮತ್ತು 3ರವರು ಠಾಣೆಯಲ್ಲಿ ಸಹಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.1 ಪಂಚನಾಮೆಯನ್ನು ತಯಾರಿಸಲು ಪೊಲೀಸರು ಬರಲು ಹೇಳಿದ್ದರು. ನಾನು ಚಾ.ಸಾ.2 ಮತ್ತು 3ರವರನ್ನು ನನ್ನ ಜೊತೆ ಕರೆದುಕೊಂಡು ಹೋಗಿದ್ದೆ. ಮೃತರಿಗೆ ಬರುವ ವಿಮೆ ಪರಿಹಾರದಲ್ಲಿ ನನಗೂ ಕೂಡ ಪಾಲು ಇದ್ದು, ಅದನ್ನು ಪಡೆಯುವ ಉದ್ದೇಶದಿಂದ ಚಾ.ಸಾ.2 ಮತ್ತು 3ರವರನ್ನು ಕರೆದುಕೊಂಡು ವೈಯಕ್ತಿಕ ಹಿತಾಸಕ್ತಿಯಿಂದ ಆರೋಪಿಯ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಮಾಹಿತಿಯೊಂದಿಗೆ ನಿ.ಪಿ.2ನ್ನು ತಯಾರಿಸಲಾಗಿದೆ ಎಂದರೆ ಸರಿಯಲ್ಲ. ಮೃತರಿಗೆ ವಯೋಸಹಜ ದೃಷ್ಟಿದೋಷವಿದ್ದು, ಅವರು ಸರಿಯಾಗಿ ವಾಹನ ಚಾಲನೆ ಮಾಡದ ಕಾರಣ ಮತ್ತು ಅವರ ನಿರ್ಲಕ್ಷತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿಯ ನಿರ್ಲಕ್ಷ ಮತ್ತು ತಪ್ಪು ಇಲ್ಲದಿದ್ದರೂ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**